# ಭಾರತೀಯ ಸ್ಪರ್ಧಿಗಳು ಕಡಿಮೆ

ರಿಯೊ ಒಲಿಂಪಿಕ್ಸ್‌ನಲ್ಲಿ ಒಟ್ಟು 28 ಕ್ರೀಡೆಗಳ 307 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು. ಅದರಲ್ಲಿ ಭಾರತವು 15 ಕ್ರೀಡೆಗಳ 115 ವಿಭಾಗಗಳಲ್ಲಿ ಸ್ಪರ್ಧಿಸಿತ್ತು. 116 ಕ್ರೀಡಾಪಟುಗಳು ಭಾಗವಹಿಸಿದ್ದರು.

ಆದರೆ ಅಮೆರಿಕದ 555 ಕ್ರೀಡಾಪಟುಗಳು ಬಹುತೇಕ ಎಲ್ಲ ವಿಭಾಗಗಳಲ್ಲಿಯೂ ಸ್ಪರ್ಧಿಸಿದ್ದರು. ಚೀನಾದ 412 ಸ್ಪರ್ಧಿಗಳು ಕೂಡ ಬಹುತೇಕ ವಿಭಾಗಗಳಲ್ಲಿ ಸ್ಪರ್ಧಿಸಿದ್ದರು.

ಭಾರತವು ಇನ್ನೂ ಸುಮಾರು 13 ಕ್ರೀಡೆಗಳಲ್ಲಿ ಒಲಿಂಪಿಕ್ಸ್‌ಗೆ ಹೋಗುವ ಸಿದ್ಧತೆಯನ್ನೇ ಮಾಡಿಕೊಂಡಿಲ್ಲ ಎಂಬುದು ಈ ಅಂಕಿ – ಅಂಶಗಳಿಂದ ಸಾಬೀತಾಗುತ್ತದೆ. ಜಗತ್ತಿನಲ್ಲಿ ಅತಿ ಹೆಚ್ಚು ಜನಸಂಖ್ಯೆ ಇರುವ ಎರಡನೇ ಅತಿ ದೊಡ್ಡ ದೇಶದಲ್ಲಿ 28 ಕ್ರೀಡೆಗಳನ್ನು ಪ್ರತಿನಿಧಿಸುವ ಪ್ರತಿಭಾವಂತರಿಲ್ಲವೋ ಅಥವಾ ಆ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಿ ಬೆಳೆಸುವ ವ್ಯವಸ್ಥೆ ಇಲ್ಲವೋ ಎಂಬುದನ್ನು ಪತ್ತೆ ಹಚ್ಚುವ ತುರ್ತು ಕಾರ್ಯ ನಡೆಯಬೇಕಿದೆ. ಎಲ್ಲ ಕ್ರಿಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಸಂಖ್ಯೆ ಹೆಚ್ಚಿದರೆ ಪದಕ ಗಳಿಕೆಯ ಸಂಖ್ಯೆಯೂ ಹೆಚ್ಚುವ ಸಾಧ್ಯತೆ ಇರುತ್ತದೆ.






ಬೀಳುಗಳನ್ನು ಕಂಡು ಕ್ವಾರ್ಟರ್‌ಫೈನಲ್ ಹಂತ ತಲುಪಿತ್ತು. ಎಂಟರ ಘಟ್ಟದಲ್ಲಿ ಬೆಲ್ಜಿಯಂ ವಿರುದ್ಧದ ಪಂದ್ಯದಲ್ಲಿ 1–0 ಮುನ್ನಡೆ ಸಾಧಿಸಿತ್ತು. ಆದರೆ, ನಂತರದ ಅವಧಿಯಲ್ಲಿ ಬೆಲ್ಜಿಯಂ ತಂಡ ಮೂರು ಗೋಲು ಹೊಡೆಯಲು ಬಿಟ್ಟು ನಿರಾಸೆ ಅನುಭವಿಸಿತು. ಹಾಕಿ ಕ್ರೀಡೆಯಲ್ಲಿ ಎಂಟು ಚಿನ್ನದ ಪದಕ ಗೆದ್ದ ಭಾರತ ತಂಡಕ್ಕೆ ಈ ವರ್ಷವೂ ಪದಕ ಬರಲಿಲ್ಲ. ಆದರೆ, 2008ರಲ್ಲಿ ಅರ್ಹತೆಯನ್ನೇ ಗಿಟ್ಟಿಸದ, 2012ರ ಒಲಿಂಪಿಕ್ಸ್‌ನಲ್ಲಿ ಆಡಿ ಕೊನೆಯ ಸ್ಥಾನದಲ್ಲಿ ಉಳಿದಿದ್ದ ತಂಡ ಈ ಬಾರಿ ಸ್ವಲ್ಪ ಉನ್ನತ ಸ್ಥಾನಕ್ಕೇರಿತು. ಚಾಂಪಿಯನ್ಸ್ ಟ್ರೋಫಿಯಲ್ಲಿ ಬೆಳ್ಳಿ ಗೆದ್ದು ಇತಿಹಾಸ ಬರೆದಿದ್ದ ತಂಡ ಒಲಿಂಪಿಕ್ಸ್ ಪದಕ ಗೆಲ್ಲುವ ಅವಕಾಶವಂತೂ ಇತ್ತು. 36 ವರ್ಷಗಳ ನಂತರ ಅರ್ಹತೆ ಪಡೆದಿದ್ದ ಮಹಿಳಾ ಹಾಕಿ ತಂಡದಿಂದ ಹೆಚ್ಚು ನಿರೀಕ್ಷೆ ಮಾಡುವಂತಿರಲಿಲ್ಲ.

ಅಥ್ಲೆಟಿಕ್ಸ್‌ನಲ್ಲಿ ಯಥಾಪ್ರಕಾರ ನಿರಾಸೆ ಮುಂದುವರೆಯಿತು. 116 ವರ್ಷಗಳಿಂದ ಅಥ್ಲೆಟಿಕ್ಸ್‌ನಲ್ಲಿ ಪದಕ ಗೆಲ್ಲುವ ಕನಸು ಈ ಬಾರಿಯೂ ಈಡೇರಲಿಲ್ಲ. ಆದರೆ, 3000 ಮೀಟರ್ಸ್ ಸ್ಟಿಪಲ್‌ಚೇಸ್‌ನಲ್ಲಿ ಫೈನಲ್ ತಲುಪಿದ್ದ ಲಲಿತಾ ಬಾಬರ್ ಹತ್ತನೇ ಸ್ಥಾನ ಪಡೆದರು. 36 ವರ್ಷಗಳ ನಂತರ 100 ಮೀಟರ್ಸ್ ಓಟಕ್ಕೆ ಅರ್ಹತೆ ಪಡೆದಿದ್ದ ಭಾರತದ ಅಥ್ಲೀಟ್ ದ್ಯುತಿ ಚಾಂದ್ ಸ್ಪರ್ಧಿಸಿದರು.

ಲಾಂಗ್‌ಜಂಪ್‌ನಲ್ಲಿ ರಂಜೀತ್ ಮಹೇಶ್ವರಿ, ಡಿಸ್ಕಸ್ ಥ್ರೋನಲ್ಲಿ ವಿಕಾಸ್ ಗೌಡ, ವಾಕಿಂಗ್‌ನಲ್ಲಿ ಕುಶ್‌ಬೀರ್ ಕೌರ್, ಸಂದೀಪಕುಮಾರ್, ಸಪ್ನಾ, ವನಿತೆಯರ ಡಿಸ್ಕಸ್ ಥ್ರೋನಲ್ಲಿ ಸೀಮಾ ಅಂಟಿಲ್ ಅವರು ನಿರಾಸೆ ಮೂಡಿಸಿದ್ದು ಅನಿರೀಕ್ಷಿತವೇನಾಗಿರಲಿಲ್ಲ.

3000 ಮೀ. ಸ್ಟಿಪಲ್ ಚೇಸ್‌ನಲ್ಲಿ ಫೈನಲ್ ತಲುಪಿದ ಲಲಿತಾ ಬಾಬರ್ ಚಿತ್ರ: ರಾಯಿಟರ್ಸ್